ಸ್ಥಾಪನೆ : 1938 ದೂರವಾಣಿ : 080–22860125
29580125

# ನ್ಯಾಯಾಂಗ ಇಲಾಖೆ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ

**ಮೊದಲನೇ ಮಹಡಿ, ಹಳೇ ಕೆ.ಜಿ.ಐ.ಡಿ ಕಟ್ಟಡ,**

**ಉಚ್ಚ ನ್ಯಾಯಾಲಯ ಆವರಣ, ಬೆಂಗಳೂರು–560 001**

**The Judicial Department Multi-Purpose Co-operative Society Ltd.,**

**First Floor, Old KGID Building, High Court Premeisess, Bengaluru – 560 001**

**E-mail Id: jdmpcsl@gmail.com web site : http://jdmcs.in**

**ಸಂಖ್ಯೆ: jdmpcs/ /2022–23** **ದಿನಾಂಕ 18/08/2022**

## ಸುತ್ತೋಲೆ–XXVI

**<u>ಗೌರವನ್ವಿತ ಸದಸ್ಯರಲ್ಲಿ ಸವಿನಯ ಮನವಿ</u>**

ಸಂಘವು 2010 ರಿಂದಲೂ ಎಸ್.ಎಸ್.ಎಲ್.ಸಿ ಮತ್ತು ದ್ವಿತೀಯ ಪಿ.ಯು.ಸಿ ಪರೀಕ್ಷೆಗಳಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಸದಸ್ಯರ ಮಕ್ಕಳ ಪ್ರತಿಭೆಯನ್ನು ಗುರುತಿಸಿ ಅವರ ಮುಂದಿನ ವ್ಯಾಸಂಗಕ್ಕೆ ಉತ್ತೇಜನ ನೀಡುವ ಸಲುವಾಗಿ ಪ್ರತಿಭಾ ಪುರಸ್ಕಾರ ಯೋಜನೆಯನ್ನು ಹಮ್ಮಿಕೊಂಡು ಬಂದಿರುತ್ತದೆ. ಅದರಂತೆ ದಿನಾಂಕ 08–07–2022ರಂದು ನಡೆದ ಸಂಘದ ಮಾಸಿಕ ಸಭೆಯಲ್ಲಿ ಸದರಿ ಯೋಜನೆಯನ್ನು 2021–22ನೇ ಸಾಲಿಗೂ ಮುಂದುವರೆಸಬೇಕೆಂದು ನಿರ್ಧರಿಸಿ ಕೆಳಕಂಡ ಷರತ್ತುಗಳೊಂದಿಗೆ ಮಾನ್ಯ ಸದಸ್ಯರಿಂದ ಅರ್ಜಿಗಳನ್ನು ಸ್ವೀಕರಿಸಲು ತೀರ್ಮಾನಿಸಲಾಗಿದೆ.

**<u>ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ ಸಲ್ಲಿಸಲು ನಿಬಂಧನೆಗಳು</u>**

1. 2021–22 ನೇ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಶೇಕಡಾ 95.00 ಮತ್ತು ಅದಕ್ಕೂ ಹೆಚ್ಚು ಹಾಗೂ ದ್ವಿತೀಯ ಪಿ.ಯು.ಸಿ. ಪರೀಕ್ಷೆಯಲ್ಲಿ ಶೇಕಡಾ 90.00 ಮತ್ತು ಅದಕ್ಕೂ ಹೆಚ್ಚಿನ ಅಂಕಗಳನ್ನು ಗಳಿಸಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ ಸಂಘದ ಮಾನ್ಯ ಸದಸ್ಯರ ಮಕ್ಕಳು ಮಾತ್ರ ಪ್ರತಿಭಾ ಪುರಸ್ಕಾರಕ್ಕೆ ಅರ್ಹರಾಗಿರುತ್ತಾರೆ. ಈ ಸಂಬಂಧ <u>ಮಾನ್ಯ ಸದಸ್ಯರು ಅರ್ಜಿಯ ಜೊತೆ ತಮ್ಮ ಮಕ್ಕಳ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಒಂದು ಭಾವಚಿತ್ರ ಹಾಗೂ ಅಂಕಪಟ್ಟಿಯ ಜೆರಾಕ್ಸ್ ಪ್ರತಿಯನ್ನು ಸಂಬಂಧಪಟ್ಟ ಪ್ರಾಂಶುಪಾಲರಿಂದ ದೃಢೀಕರಿಸಿ ಲಗತ್ತಿಸಬೇಕು.</u>
2. ಅರ್ಜಿ ಸಲ್ಲಿಸಲು ದಿನಾಂಕ 20–08–2022ರಂದು ಕೊನೆಯ ದಿನಾಂಕವೆಂದು ಪ್ರಕಟಿಸಿದ್ದು ಸದರಿ ದಿನಾಂಕವನ್ನು 30–08–2022ರವರೆಗೆ ಮುಂದುಡಾಗಿರುತ್ತದೆ. ತದನಂತರ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.
3. ಅರ್ಜಿಗಳನ್ನು ಖುದ್ದಾಗಿ, ಅಂಚೆ ಅಥವಾ ಕೊರಿಯರ್ ಮೂಲಕ ಸಂಘಕ್ಕೆ ಸಲ್ಲಿಸಬಹುದು. ಅರ್ಜಿಯಲ್ಲಿ ಸಂಘದ ಸದಸ್ಯರ ಹೆಸರು, ಕಾರ್ಯ ನಿರ್ವಹಿಸುತ್ತಿರುವ ನ್ಯಾಯಾಲಯದ ಹೆಸರು, ಸ್ಥಳ, ಖಾತೆ ಸಂಖ್ಯೆ, ಮನೆಯ ವಿಳಾಸ, ಮೊಬೈಲ್ ಸಂಖ್ಯೆ ಇತ್ಯಾದಿ ವಿವರಗಳನ್ನು ನಮೂದಿಸಬೇಕು.
4. ಅರ್ಜಿಗಳ ಪರಿಶೀಲನೆ ಮತ್ತು ಪುರಸ್ಕಾರಕ್ಕೆ ಆಯ್ಕೆಯಾಗುವ ಪ್ರತಿಭಾವಂತ ವಿದ್ಯಾರ್ಥಿ/ವಿದ್ಯಾರ್ಥಿನಿಯರ ಸಂಖ್ಯೆ, ಇತ್ಯಾದಿ ವಿಷಯಗಳ ಬಗ್ಗೆ ನಿರ್ಣಯ ಕೈಗೊಳ್ಳುವ ಅಧಿಕಾರ ಕಾರ್ಯಕಾರಿ ಸಮಿತಿಗೆ ಸೇರಿರುತ್ತದೆ.
5. ಆಯ್ಕೆಯಾದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪುರಸ್ಕಾರ ನೀಡುವ ಬಗ್ಗೆ ಮಾಹಿತಿಯನ್ನು ಮುಂಚಿತವಾಗಿ ತಿಳಿಸಲಾಗುವುದು ಮತ್ತು ಈ ಪುರಸ್ಕಾರವನ್ನು ಸಂಘದ 2021–22 ನೇ ಸಾಲಿನ ಮಹಾ ಸಭೆಯಲ್ಲಿ ವಿತರಿಸಲಾಗುವುದು.
6. ಆಯ್ಕೆ/ಪುರಸ್ಕಾರದ ರೀತಿ–ನೀತಿ ಮತ್ತು ರೂಪುರೇಷೆಗಳ ಬಗ್ಗೆ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ.

ಮಾನ್ಯ ಸದಸ್ಯರು ಈ ಯೋಜನೆಯನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಈ ಮೂಲಕ ವಿನಂತಿಸಲಾಗಿದೆ ಮತ್ತು ಈ ಯೋಜನೆಯ ವಿವರಗಳನ್ನು ಇತರೆ ಸದಸ್ಯ ಮಿತ್ರರಿಗೂ ತಿಳಿಸಬೇಕೆಂದು ಕೋರಲಾಗಿದೆ.

ಕಾರ್ಯಕಾರಿ ಸಮಿತಿ ಅಪ್ಪಣೆಯ ಮೇರೆಗೆ

**ಸಹಿ/–**

(ಕಾಂತರಾಜ್ ಎಸ್.ಎನ್)

ವ್ಯವಸ್ಥಾಪಕರು/ ವೇತನ ಕಾರ್ಯದರ್ಶಿ

ಸ್ಥಾಪನೆ : 1938 ದೂರವಾಣಿ : 080–22860125
29580125

# ನ್ಯಾಯಾಂಗ ಇಲಾಖೆ ವಿವಿಧೋದ್ದೇಶ ಸಹಕಾರ ಸಂಘ ನಿಯಮಿತ
ಮೊದಲನೇ ಮಹಡಿ, ಹಳೇ ಕೆ.ಜಿ.ಐ.ಡಿ ಕಟ್ಟಡ,
ಉಚ್ಚನ್ಯಾಯಾಲಯ ಆವರಣ, ಬೆಂಗಳೂರು–560 001

**The Judicial Department Multi-Purpose Co-operative Society Ltd.,**
**First Floor, Old KGID Building, High Court Premeisess, Bengaluru – 560 001**
**E-mail Id: jdmpcsl@gmail.com web site : http://jdmcs.in**

ಸಂಖ್ಯೆ: jdmpcs/ /2022–23 ದಿನಾಂಕ 18/08/2022

## ಸುತ್ತೋಲೆ–XXVII

ಕರ್ನಾಟಕ ಸರ್ಕಾರದ ವತಿಯಿಂದ ಎಲ್ಲಾ ಇಲಾಖೆಗಳಲ್ಲಿಯೂ ಖಡ್ಡಾಯವಾಗಿ ಖಜಾನೆ–2ರ ವ್ಯವಸ್ಥೆಯನ್ನು ಜಾರಿಗೆ ತಂದಿರುವುದರಿಂದ ಜಿಲ್ಲಾ ಕೇಂದ್ರ ಹಾಗೂ ತಾಲ್ಲೂಕು ಕೇಂದ್ರಗಳಲ್ಲಿನ ಎಲ್ಲಾ ನ್ಯಾಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಘದ ಸದಸ್ಯರ ವೇತನದಿಂದ ಕಟಾವು ಮಾಡಲಾದ ಮೊತ್ತವನ್ನು ಜಿಲ್ಲಾ ಖಜಾನೆ/ತಾಲ್ಲೂಕು ಖಜಾನೆ(ಡಿಟಿಓ/ಎಸ್‌ಟಿಓ) ವತಿಯಿಂದ ಸಂಘದ ಬ್ಯಾಂಕ್ ಖಾತೆಗೆ ಪ್ರತ್ಯೇಕವಾಗಿ ಜಮಾಗೊಳಿಸುತ್ತಿದ್ದು. ಬದಲಾಗಿ ಆ ವ್ಯಾಪ್ತಿಯಲ್ಲಿನ ಎಲ್ಲಾ ನ್ಯಾಯಾಲಯಗಳಿಗೆ ಸಂಬಂಧಪಟ್ಟ ಮೊತ್ತವನ್ನು ಕ್ರೋಢೀಕರಿಸಿ ಒಟ್ಟಾಗಿ ಒಂದೇ ಬಾರಿಗೆ ಸಂಘದ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತಿದ್ದು ಯಾವ ನ್ಯಾಯಾಲಯದಿಂದ ಎಷ್ಟೆಷ್ಟು ಹಣವನ್ನು ಕಟಾವು ಮಾಡಲಾಗಿದೆ ಎಂಬ ಸ್ಪಷ್ಟ ಚಿತ್ರಣ ಸಂಘಕ್ಕೆ ಲಭ್ಯವಾಗುತ್ತಿಲ್ಲ. ಜೊತೆಗೆ ಖಜಾನೆ–2 ಮೂಲಕ ಹಣವನ್ನು ಸಂಘದ ಖಾತೆಗೆ 20 ರಿಂದ 25 ದಿನಗಳ ನಂತರ ಜಮಾ ಮಾಡಲಾಗುತ್ತಿದ್ದು ಯಾವ ಸದಸ್ಯರ ಖಾತೆಗಳಿಗೆ ಎಷ್ಟೆಷ್ಟು ಹಣ ಜಮಾ ಮಾಡಬೇಕೆಂಬ ಗೊಂದಲ ಏರ್ಪಟ್ಟು ಪ್ರತಿ ತಿಂಗಳು ರಿಕವರಿ ಷೆಡ್ಯೂಲ್ ತಯಾರಿಸುವಲ್ಲಿ ತಡವಾಗುತ್ತಿದೆ ಹಾಗೂ ನಿಗದಿತ ಸಮಯದಲ್ಲಿ ಸದಸ್ಯರ ಸಾಲದ ಖಾತೆಗಳಿಗೆ ಹಣವನ್ನು ಜಮಾ ಮಾಡಲು ಸಾಧ್ಯವಾಗುತ್ತಿಲ್ಲ.

ಆದ ಕಾರಣ ಪ್ರತಿ ನ್ಯಾಯಾಲಯದ ಸದಸ್ಯರ ವೇತನದಿಂದ ಕಟಾವುಗೊಳಿಸಿದ ಬಗ್ಗೆ HRMS ಸ್ಟೇಟ್‌ಮೆಂಟ್ ಹಾಗೂ ಸಂಘದಿಂದ ಕಳುಹಿಸಲಾಗುವ ರಿಕವರಿ ಸ್ಟೇಟ್‌ಮೆಂಟ್‌ನ್ನು ಪ್ರತಿ ತಿಂಗಳು 05ನೇ ತಾರೀಖಿನ ಒಳಗಾಗಿ ಕೋರಿಯರ್/ಇ–ಮೈಲ್/ಸ್ಪೀಡ್‌ಪೋಸ್ಟ್‌ನ ಮೂಲಕ ಸಂಘದ ಕಛೇರಿಗೆ ತಲುಪುವಂತೆ ವ್ಯವಸ್ಥೆ ಮಾಡಲು ಸಂಬಂಧಪಟ್ಟ ಎಲ್ಲಾ ಶಿರಸ್ತೇದಾರರಲ್ಲಿ/ಸಕ್ಷಮ ಅಧಿಕಾರಿಗಳಲ್ಲಿ ಈ ಮೂಲಕ ವಿನಂತಿಸಿಕೊಳ್ಳುತ್ತಿದ್ದೇವೆ.

ಮುಂದುವರೆದು ಕೆಲ ಸದಸ್ಯರು ಖಜಾನೆ–2ರ ಮೂಲಕ ಸಂಘದ ಮಾಸಿಕ ಕಂತನ್ನು ಪಾವತಿಸುವ ಬದಲು ಸ್ವತಃ ತಾವೇ ಹಣವನ್ನು ಸಂಘದಲ್ಲಿ ನೇರವಾಗಿ ಹಾಗೂ ಸಂಘದ ಬ್ಯಾಂಕ್ ಖಾತೆಗೆ ಪಾವತಿಸುತ್ತಿದ್ದು ಅಂತಹ ಸದಸ್ಯರಿಗೆ ಹಬ್ಬದ ಮುಂಗಡ, ಅಲ್ಪಾವಧಿಸಾಲ ಹಾಗೂ ಧೀರ್ಘಾವಧಿ ಸಾಲವನ್ನು ಮಂಜೂರು ಮಾಡಲಾಗುವುದಿಲ್ಲ. ಹಾಗೂ ಖಜಾನೆ–2ರ ಮೂಲಕ ಸಂಘದ ಮಾಸಿಕ ಕಂತನ್ನು ಪಾವತಿಸಿದರೆ ಸಂಘದ ಸದಸ್ಯರಿಗೆ ಅವರ ಕಟಾವುಗಳ ನಿಖರವಾದ ಮಾಹಿತಿಯು ಸದಸ್ಯರ ವೇತನದ ಪಟ್ಟಿಯಲ್ಲಿಯೇ ಲಭ್ಯವಿರುತ್ತದೆ.

<u>ಸಂಘದ ಸದಸ್ಯರು ಸಾಲಕ್ಕೆ ಅರ್ಜಿ ಸಲ್ಲಿಸುವಾಗ ಅರ್ಜಿಯೊಂದಿಗೆ ಅವರ ಬ್ಯಾಂಕ್ ಖಾತೆಯ ಪಾಸ್ ಪುಸ್ತಕದ ನಕಲನ್ನು ಸ್ವಯಂ ಧೃಡೀಕರಿಸಿ ಸಂಘಕ್ಕೆ ಸಲ್ಲಿಸಿದರೆ ನೇರವಾಗಿ ಸದಸ್ಯರ ಬ್ಯಾಂಕ್ ಖಾತೆಗೆ ಸಾಲದ ಹಣವನ್ನು ವರ್ಗಾಯಿಸಲಾಗುವುದು.</u>

<u>ಸಂಘದ ಬ್ಯಾಂಕ್ ಖಾತೆಗಳ ವಿವರಗಳು</u> :-

1) State Bank Of India, Dr.Ambedkar Veedi Branch, Account No.64051973406, IFSC Code No. SBIN0040022, MICR Code 560002438.
<u>KHAJANE II RECIPIENT ID 2102671301</u>
2) Kotak Mahindra Bank, High Court Branch, Account No.201111000039, IFSC Code No.KKBK0008085, MICR No.560485078.
<u>KHAJANE II RECIPIENT ID 2100206226</u>
3) ಸಂಘದ ಇ–ಮೈಲ್ ಐಡಿ jdmpcsl@gmail.com

ಕಾರ್ಯಕಾರಿ ಸಮಿತಿ ಅಪ್ಪಣೆಯ ಮೇರೆಗೆ

**ಸಹಿ/–**

(ಕಾಂತರಾಜ್ ಎಸ್.ಎನ್)
ವ್ಯವಸ್ಥಾಪಕರು/ ವೇತನ ಕಾರ್ಯದರ್ಶಿ